# ಹಾಡು ಪಾಡುಗಳ ನೇವರಿಸುತ್ತ

ದಣಿವಾದಾಗ, ದುಃಖವಾದಾಗ, ಖುಷಿಯಾದಾಗ, ಸುಖದಲ್ಲಿದ್ದಾಗಲೂ, ಬೇಸರವಾದಾಗಲೂ ನಮ್ಮ ನವರಸಗಳಿಗೂ ಜೊತೆಗೂಡುವುದು ಹಾಡಿನ ಗುನುಗು. ಹಾಡು ಗುನುಗುತ್ತಲೇ ಬದುಕಿನ ಪಾಡನ್ನು ಸೈರಿಸುವ ಬಲ ಪಡೆಯುವುದು ಸಹಜ.

‘ಮೈ ಜಿಂದಗಿ ಕಾ ಸಾಥ್ ನಿಭಾತಾ ಚಲಾ ಗಯಾ’; ಕೈಲಾಗದು ಎಂದು ಕೈ ಕಟ್ಟಿ ಕುಳಿತರೆ; ನಗು ಎಂದಿದೆ...; ನಗುನಗುತಾ ನಲಿ ನಲಿ; ಈ ಹಾಡಿನ ಮೊದಲ ಸಾಲು ಕೇಳಿದ ತಕ್ಷಣ ನಮ್ಮಷ್ಟಕ್ಕೆ ನಾವೇ ಮುಂದಿನ ಸಾಲುಗಳನ್ನು ಗುನುಗಲು ಆರಂಭಿಸುತ್ತೇವೆ.

ಮಳೆ ಬರುವಾಗ, ಮಳೆಯ ಹನಿಯೊಂದು ಬುವಿ ಸ್ಪರ್ಶಿಸಿ ಮಣ್ಣಿನ ಹದವಾದ ವಾಸನೆ ಮೂಗಿನ ಹೊರಳೆಗೆ ಬಂದಾಗಲೆಲ್ಲ ಹಾಡು ನೆನಪಾಗುತ್ತದೆ. ‘ಬರಸಾತ್ ಮೆ ಹಮ್ ಸೆ ಮಿಲೆ ತುಮ್ ಸಜನ್ ತುಮ್‌ಸೆ ಮಿಲೆ ಹಮ್, ಬರಸಾತ್ ಮೆ’ ಈ ಹಾಡಿನೊಂದಿಗೆ ಬರೀ ಸಂಗೀತ ನೆನಪಾಗುವುದಿಲ್ಲ. ಹಂಗೆ ನಮಗೆ ಬದುಕಿನ ಒಂದೊಂದು ತಿರುವಿನಲ್ಲಿ ಭೇಟಿಯಾದವರೆಲ್ಲ ನೆನಪಾಗುತ್ತಾರೆ. ಸಿಕ್ಕವರು ಬದುಕು ಸಿಕ್ಕಾಗಿಸಿದವರೋ, ಬದುಕಲೆಂದೇ ಸಿಕ್ಕವರೋ ಎಂಬುದು ಮುಂದಿನ ಯಾವ ಹಾಡು ಎನ್ನುವುದರ ಮೇಲೆ ನಿರ್ಧಾರವಾಗುತ್ತದೆ.

ಆದರೆ ಮಳೆ ಮತ್ತು ಸಂಗೀತ ಎರಡೂ ನಮ್ಮನ್ನು ಹಿಡಿದಿಡುವುದು, ಮನದೊಳಗಿನ ಮಾತುಗಳಿಗೆ ನಾವೇ ಕಿವಿಯಾಗುವುದು. ಒಮ್ಮೆ ತುಟಿಯಂಚಿಗೆ ನಗುವಾಗಿ ಮಳೆನೀರಿನಲ್ಲಿ ಮಕ್ಕಳು ಬಿಡುವ ನಾವೆಯಂತಹ ನಗು ತೇಲಿ ಬರುತ್ತದೆ. ಇಲ್ಲವೇ ಮಳೆನೀರು ಅದೆಷ್ಟು ತಣ್ಣಗಿದೆ ಎನಿಸುವಂತೆ ಕೆನ್ನೆಮೇಲೆ ಬಿಸಿನೀರಿನ ಹನಿಯೊಂದು ಕಣ್ಣಿಂದಿಳಿದು ಬರುತ್ತದೆ.

ಇವೆರಡರ ನಡುವೆ ಜೀಕುವ ಮನದೊಳಗೆ ಮತ್ತೆ ಒಂದಷ್ಟು ಹಾಡುಗಳ ಜೀಕು ಇದ್ದೇ ಇರುತ್ತದೆ. ನಮ್ಮ ಪಾಡುಗಳೇ ಹಾಡಾದವೆ? ಹಾಡುಗಳಿಂದಲೇ ನಮ್ಮ ಪಾಡು ಬದಲಾಗುತ್ತದೆಯೇ ಎಂಬ ಪ್ರಶ್ನೆ ಮಳೆ ನಿಂತಾಗಲೂ, ನಿಂತ ಮೇಲೂ ಕಾಡುತ್ತದೆ.

ದೂರದ ಊರಿಗೆ ಪ್ರಯಾಣಿಸುವಾಗ ನಾವು ಕುಳಿತ ಕಿಟಕಿಯ ಗಾಜಿನ ಮೇಲೆ ಸರಿಯುವ ಹನಿಗಳೆಲ್ಲ ಮಿನಿಕತೆಗಳನ್ನೇ ಹೇಳುತ್ತಿರುತ್ತವೆ. ಆದರೆ ಆ ಮಿನಿ ಕತೆಗಳಲ್ಲಿ ಹನಿಯ ಸವಿಯಿದ್ದರಂತೂ ನಗುನಗುತ್ತಲೇ ಹಾಡು ಗುನುಗುತ್ತಲೇ ಪ್ರಯಾಣ ಸಾಗುತ್ತದೆ. ನಮ್ಮ ಪ್ರಯಾಣ ಮುಂದೆ ಸಾಗಿದಂತೆಲ್ಲ ಮನಸು ಹಿಮ್ಮುಖದಲ್ಲಿ ಚಲಿಸುವುದು ಸಾಮಾನ್ಯ. ಈ ವೈರುಧ್ಯ ಎಲ್ಲ ಪ್ರಯಾಣಗಳಲ್ಲಿಯೂ ಕಾಣುತ್ತದೆ. ಆಗಲೇ ಹಾಡು ಕೇಳಬೇಕೆನಿಸುವುದು.

ಆ ಕೇಳುವ ಹಾಡುಗಳಲ್ಲಿ ನಮ್ಮ ನೆನಪಿನ ಭೃಂಗ ಗುಂಞಗುಡುವಂತೆ ಇನ್ನೆಲ್ಲ ಮಾತುಗಳೂ ಕೇಳತೊಡಗುತ್ತವೆ. ಹಾಡು ಮತ್ತು ಸಂಗೀತ ಎಲ್ಲ ಸಖ್ಯ ಸಾಂಗತ್ಯಗಳಿಗಿಂತಲೂ ಹೆಚ್ಚಿನ ಸಮಾಧಾನ ನೀಡುತ್ತವೆ.

ಪ್ರತಿದಿನವೂ ಒಂದಷ್ಟು ದೂರ ನಡೆಯಲೇಬೇಕು ಎಂಬ ಗುರಿ ನಿಗದಿಪಡಿಸಿಕೊಂಡಾಗ, ಹೆಜ್ಜೆಗಳೆಣಿಸುವಾಗ ಏದುಸಿರು ಬರತೊಡಗುತ್ತದೆ. ಆದರೆ ಹಾಡುಗಳಿದ್ದರೆ, ಮೂರು ಹಾಡು, ಐದು ಹಾಡು, ಹನ್ನೊಂದು ಹಾಡುಗಳ ಗುರಿ ಇರಿಸಿಕೊಂಡು ನಡೆಯುವಾಗ ಸುಳಿಯುವ ತಂಗಾಳಿ ಬೆವರನ್ನೂ ಆವಿಯಾಗಿಸಿಕೊಂಡು ಹೊರಡುತ್ತದೆ. ಪರಿಶ್ರಮವೂ ಹಾಯೆನಿಸುವ ಆ ಗಳಿಗೆಯಲ್ಲಿ ಕಿವಿಯಲ್ಲಿ ಉಲಿಯುವ ಗಾಯಕ–ಗಾಯಕಿಯರು ನಮಗರಿವಿಲ್ಲದೇ ನಮ್ಮ ಮನಸಿನ ಕೋಟೆಗೆ ಲಗ್ಗೆ ಹಾಕಿರುತ್ತಾರೆ.

ಹಾಡು ಕೇಳುವುದೂ ಧ್ಯಾನವಿದ್ದಂತೆ. ಹಾಡಿನ ಮೊದಲ ಚರಣ ಗುನುಗುವ ನಾವು, ಎರಡನೆಯ ಚರಣದ ಹೊತ್ತಿಗೆ, ನಾದನಿಧಿಗೆ ಶರಣಾಗಿರುತ್ತೇವೆ. ನಮ್ಮ ಒಳಗಿನ ಗಲ್ಲಿಗಳೆಲ್ಲ ಹಾದು ಬರಲು ಹಾಡಿನ ಶಾರೀರಕ್ಕೆ ಅನುಮತಿಸಿರುತ್ತೇವೆ. ಮುಂದೆ ಮುಂದೆ ಹಾಡು ಕೇಳುತ್ತ ಕೇಳುತ್ತ ನಾವೇ ಹಾಡಾಗುವ ಕ್ಷಣಗಳೂ ಬರುತ್ತವೆ. ಆ ನಂತರದ ಹಂತ, ನಾವೇ ಆ ಹಾಡಾಗಿ ಮೈಮರೆಯುವುದು. ಇಂಥ ಮರೆವಿನಲ್ಲಿದ್ದಾಗಲೇ ಮತ್ತೊಂದು ಹಾಡು ತೇಲಿ ಬರುತ್ತದೆ. ಮತ್ತೆ ಬದುಕಿನ ಬೇರೆ ಸನ್ನಿವೇಶಗಳತ್ತ ಮಗ್ಗುಲು ಹೊರಳಿಸುತ್ತೇವೆ.

ಬೆಳೆಯುವ ಮಗಳಿಗೆ ನೋಡಿದಾಗಲೆಲ್ಲ ‘ಮೇರೆ ಘರ್ ಆಯಿ ಏಕ್ ನನ್ಹಿ ಪರಿ’ ಹಾಡು ನೆನಪಾದಂತೆಯೇ, ಮಗನನ್ನು ಕಂಡಾಗ ‘ಚಂದಾ ಹೈ ತೂ, ಮೇರಾ ಸೂರಜ್ ಹೈ ತೂ’ ಹಾಡು ನೆನಪಾಗದೇ ಇರದು. ನಮ್ಮ ಬಾಂಧವ್ಯಗಳಿಗೂ ಒಂದೊಂದು ಹಾಡನ್ನು ನಮ್ಮ ಸಿನಿಮಾರಂಗ ನೀಡಿದೆ. ಹುಟ್ಟಿದ ಎಲ್ಲ ಮಕ್ಕಳೂ ‘ಲಾಲಿ...’ ಹಾಡು ಕೇಳಿ ಬೆಳೆಯುವಂತೆ, ಬೆಳೆದಂತೆಲ್ಲ ನಮ್ಮ ಸುತ್ತಲೂ ಹಾಡುಗಳ ಮೆರವಣಿಗೆಯನ್ನಿರಿಸಿಕೊಂಡಿರುತ್ತಾರೆ. ಹಾಡುಗಳಿಲ್ಲದೆ ಬೆಳೆಯುವುದು ಅಸಾಧ್ಯವೇ ಎಂಬಷ್ಟು ಸಂಗೀತದಲ್ಲಿ ಮಿಂದೇಳುವುದು ಇದ್ದೇ ಇದೆ.

ಪ್ರಪಂಚದ ಎಲ್ಲ ಸಂಸ್ಕೃತಿಗಳಲ್ಲಿಯೂ ಬದುಕಿನ ಎಲ್ಲ ಘಟ್ಟಗಳನ್ನೂ ಸಂಭ್ರಮಿಸಲು ಹಾಡುಗಳಿದ್ದೇ ಇವೆ. ಜನಪದೀಯರು ಅದಕ್ಕೇ ಹೇಳಿದ್ದು, ‘ಮುಗಿದಾವ ನಿಮ್ಮ ಕಾಲ, ಮುಗೀಲಿಲ್ಲ ನಮ್ಮ ಹಾಡು’ ಅಂತ. ಎಂದೂ ಮುಗಿಯದ ಹಾಡುಗಳ ಪರಂಪರೆ ಯಾವತ್ತಿಗೂ ನಿಲ್ಲುವುದಿಲ್ಲ. ■



ನಿಮ್ಮ ಬದುಕಿನಲ್ಲಿಯೂ ಹಾಡುತ್ತ, ಹಾಡು ಕೇಳುತ್ತ, ಹಾಡು ಗುನುಗುತ್ತ ಬದುಕು ಸಹನೀಯವೆನಿಸಿರಬಹುದು. ಸಂಭ್ರಮಿಸಿರಬಹುದು. ಸಂಕಟಪಡುವಾಗಲೂ ಇದು ನನ್ನೊಬ್ಬನದೇ ಸಂಕಟವಲ್ಲ ಎಂಬಂತೆ ಸಮಾಧಾನವನ್ನೂ ಮಾಡಿಕೊಂಡಿರಬಹುದು. ಹಾಡಿನೊಂದಿಗೆ ನಿಮ್ಮ ಸಾಂಗತ್ಯವನ್ನು ನೀವೂ ಹಂಚಿಕೊಳ್ಳಬಹುದಲ್ಲ. ಹೀಗೆ ಕಾಡುವ ಹಾಡು, ಕಾಡಿದ ಪಾಡನ್ನು ಸಹನೀಯವಾಗಿಸಿದ್ದರೆ, ನೀವೂ ಬರೆದುಕಳುಹಿಸಿ. ನೂರೈವತ್ತು ಪದಮಿತಿಯಲ್ಲಿ. ನುಡಿ ಅಥವಾ ಯುನಿಕೋಡ್‌ನಲ್ಲಿ ನಿಮ್ಮ ಲೇಖನವಿರಲಿ. editorsu@sudha.co.inಗೆ ಮೇಲ್ ಮಾಡಿ.